


**ವೈದಿಕ ಅವೈದಿಕ ದರ್ಶನ**
– ಪ್ರಾಚೀನ ಭಾರತೀಯ ವಾಗ್ವಾದಗಳು
ಬರಹ ರೂಪ: ಪ್ರಜ್ಞಾ ಶಾಸ್ತ್ರಿ
ಪು: 136 ಬೆ: 150
ಪ್ರ: ಋತುಮಾನ ಟ್ರಸ್ಟ್
ಎಫ್–3, 'ಎ' ಬ್ಲಾಕ್, ಶಾಂತಿನಿಕೇತನ ಅಪಾರ್ಟ್‌ಮೆಂಟ್, ಶಾಂತಿನಿಕೇತನ ಬಡಾವಣೆ, ಅರೆಕೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 076

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

ದ್ರಾವಿಡ, ಆರ್ಯ ಜನಾಂಗಗಳನ್ನು ವೈದಿಕ, ಅವೈದಿಕವೆಂದು ಕರೆಯುವ ರೂಢಿಯೂ ಇದೆ. ಬಹುಮುಖ್ಯವಾಗಿ ಇವುಗಳ ನಡುವೆ ತಾತ್ವಿಕ ಜಿಜ್ಞಾಸೆಗಳು ನಿರ್ಮಾಣಗೊಂಡಿದ್ದು ಎಲ್ಲಿ ಮತ್ತು ಹೇಗೆ ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಇಂದಿಗೂ ಭಾಷಿಕ, ಜಾನಾಂಗಿಕ ಸಂಶೋಧನೆಗಳು ನಡೆಯುತ್ತಲೇ ಇವೆ. ಆದರೆ, ವೇದಪೂರ್ವದಲ್ಲಿ ಅವೈದಿಕ ಎನ್ನಬಹುದಾದ ಜನಾಂಗಗಳು ಸಾಕಷ್ಟು ಚಲನಶೀಲವಾಗಿದ್ದವು. ವೇದಗಳ ಕಾಲದಲ್ಲೂ ಕವಷ ಐಲೂಷನಂತಹ ಅಂತ್ಯಜ ಜ್ಞಾನಿಗಳಿದ್ದರು. ಸಮಸ್ಯೆಯಾಗಿರುವುದು ವೇದೋತ್ತರ ಕಾಲದ ವರ್ಗ, ವರ್ಣಗಳ ಬಿಕ್ಕಟ್ಟುಗಳಿಂದ. ಪುರುಷಸೂಕ್ತದ ಮುಖ್ಯ ಭಾಗವೆಂದು ಕರೆದಿರುವ ಶ್ರೇಣೀಕರಣ ವ್ಯವಸ್ಥೆ ಉಂಟುಮಾಡಿದ ಹಿಂಸೆಗಳು ಅಖಿಲ ಎನ್ನಬಹುದಾದ 'ಭಾರತ'ದ ಉದ್ದಕ್ಕೂ ಹರಡಿದವು. ಇದಕ್ಕೆ ಮನುವಿನ ಕಠಿಣ ಸೂತ್ರಗಳು ಮತ್ತಷ್ಟು ತರತಮಗಳನ್ನು ಉಂಟುಮಾಡಿದವು. ಇದಕ್ಕೆ ಮತ್ತೊಂದು ಊಹಾತ್ಮಕ ಪ್ರಶ್ನೆ ಎತ್ತಬಹುದಾದರೆ ಮನುಸ್ಮೃತಿಗೆ ಮಡಿವಂತ ಬ್ರಾಹ್ಮಣವರ್ಗ ಮತ್ತು ಪ್ರಭುತ್ವಗಳು ಸೇರಿಸಿದ ಪ್ರಕ್ಷಿಪ್ತಗಳೆಷ್ಟು? ಏಕೆಂದರೆ, ಭಾರತೀಯ ಮಟ್ಟದಲ್ಲಿ ಪುರಾಣ, ವೇದ ಮತ್ತು ಕಾವ್ಯಗಳಿಗೆ ಪ್ರಕ್ಷಿಪ್ತಗಳ ಚರಿತ್ರೆಯೇ ಇದೆ. ಈ ಕಾರಣಕ್ಕಾಗಿ ನಾವು ಸಮಾಜಶಾಸ್ತ್ರೀಯ ಮತ್ತು ರಾಜಕೀಯ ದೃಷ್ಟಿಕೋನಗಳಿಂದ ಪ್ಯಾನ್ ಇಂಡಿಯಾ ಚೌಕಟ್ಟಿನಲ್ಲಿ ಮನುವಿನ ಹಿಂದೂ ನಿಯಮಗಳನ್ನು, ಕೌಟಿಲ್ಯನ ರಾಜನೀತಿಗಳನ್ನು ಮತ್ತೊಮ್ಮೆ ಆಳವಾಗಿ ನೋಡಬೇಕಾಗಿದೆ. ಹಾಗೆ ನೋಡಿದರೆ ಶೂದ್ರ ಸರ್ಕಾರವಾಗಿ ಮೌರ್ಯರ ಆಡಳಿತದ ಚೌಕಟ್ಟಿನಲ್ಲಿ ಬರುವ ಕೌಟಿಲ್ಯನ ರಾಜನೀತಿಗಳು ಕೊಂಚವಾದರೂ ಸಡಿಲವಾಗಿದ್ದವು. ಆ ವೇಳೆಗೆ ವೇದಗಳ ಉಗ್ರ ವರ್ಣವ್ಯವಸ್ಥೆಯನ್ನು ಪ್ರತಿಪಾದಿಸುತ್ತಿದ್ದ